# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಇವರು ನಿಯಮ 330ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ಕರ್ನಾಟಕ ರಾಜ್ಯದಲ್ಲಿ ಪ್ರತಿದಿನ ಸರಾಸರಿ 1.8 ಕೋಟಿ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗುತ್ತಿದ್ದು, ಈ ಪೈಕಿ ಹಾಲು ಉತ್ಪಾದಕರ ಕುಟುಂಬದವರ ಬಳಕೆಗೆ ಬೇಕಾಗಿರುವ ಅವಶ್ಯ ಹಾಲನ್ನು ಬಿಟ್ಟು, ಸುಮಾರು 1.2 ಕೋಟಿ ಲೀಟರ್‌ಗಳಷ್ಟು ಹಾಲು ವಿವಿಧ ಹಂತದ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. ಈ ರೀತಿ ಲಭ್ಯವಾಗುವ ಹಾಲಿನ ಶೇಕಡಾ 70% ರಷ್ಟು ಅಂದರೆ, 80 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ– KMF ರಾಜ್ಯದಲ್ಲಿರುವ ತನ್ನ ವಿವಿಧಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳಿಂದ ಶೇಖರಿಸುತ್ತದೆ,

ಮುಂದುವರೆದು, ವಿವಿಧ ಜಿಲ್ಲಾ ಒಕ್ಕೂಟಗಳು ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ 5/- ಸಹಾಯಧನ ಸೇರಿದಂತೆ ಹಾಲು ಉತ್ಪಾದಕ ರೈತರಿಗೆ ಪ್ರತಿ ಲೀಟರ್‌ಗೆ ರೂ 29/- ನೀಡುತ್ತಿದ್ದವು. ಆದರೆ, ರಾಜ್ಯದಲ್ಲಿನ ಎಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕ ರೈತರಿಂದ ಶೇಖರಿಸುವ ಪ್ರತಿ ಲೀಟರ್ ಹಾಲಿನ ಬೆಲೆಯನ್ನು ರೂ 1.5 ಗಳಿಂದ ಕೆಳಗೆ ಇಳಿಸಿದೆ. ಇದರಿಂದ, ರಾಜ್ಯದಲ್ಲಿನ ಹಾಲು ಉತ್ಪಾದಕ ರೈತರು ಸಂಕಷ್ಟದಲ್ಲಿ ಇದ್ದಾರೆ.

ಮುಂದುವರೆದು, ಕೊರೋನಾ ಸೋಂಕು ಹರಡುವಿಕೆ ಹಿನ್ನೆಲೆಯಲ್ಲಿ ದೇಶ ಮತ್ತು ರಾಜ್ಯದಲ್ಲಿ ವಿಧಿಸಲಾದ ಲಾಕ್‌ಡೌನ್‌ನಿಂದ ಹಾಲು ಉತ್ಪಾದಕರು ಆರ್ಥಿಕವಾಗಿ ಕುಗ್ಗಿದ್ದಾರೆ. ಹಸುಗಳಿಗೆ ಒದಗಿಸಿದ ಆಹಾರದ ಬೆಲೆ ಗಗನಕ್ಕೇರಿದೆ. ಅಲ್ಲದೆ, ರಾಜ್ಯ ಸರ್ಕಾರದಿಂದ ಹಾಲು ಒಕ್ಕೂಟಗಳಿಗೆ ನೀಡಬೇಕಾಗಿರುವ ನೂರಾರು ಕೋಟಿ ಸಹಾಯಧನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಸಾರ್ವಜನಿಕರ ಮತ್ತು ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

****

**ಹೇಳಿಕೆ:**

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿಯು 1984 ರಲ್ಲಿ ಸ್ಥಾಪನೆಯಾಗಿ, ಹೈನು ಅಭಿವೃದ್ಧಿ ಯೋಜನೆಗಳನ್ನು ರಾಜ್ಯಾದ್ಯಂತ ವಿಸ್ತರಿಸಿ, 14 ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳ ಮುಖಾಂತರ ಹೈನುಗಾರ ಆರ್ಥಿಕ ಮತ್ತು ಸಾಮಾಜಿ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ.

ಪ್ರಸ್ತುತ ರಾಜ್ಯದ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ 14 ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳಡಿ 227 ತಾಲ್ಲೂಕುಗಳ 24107 ಹಳ್ಳಿಗಳನ್ನೊಳಗೊಂಡಂತೆ ಪ್ರಸ್ತುತ 14,914 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 25.77 ಲಕ್ಷ ಗ್ರಾಮೀಣ ರೈತರು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದು, ಇದರಲ್ಲಿ 9.37 ಲಕ್ಷ ಮಹಿಳಾ ಸದಸ್ಯರು, 2.68 ಲಕ್ಷ ಪರಿಶಿಷ್ಟ ಜಾತಿ, 1.52 ಲಕ್ಷ ಪರಿಶಿಷ್ಟ ಪಂಗಡ ಸದಸ್ಯರಿದ್ದು, ಈ ಸಾಲಿನಲ್ಲಿ ದಿನವಹಿ ಸರಾಸರಿ 85.00 ಲಕ್ಷ ಲೀಟರ್ ಹಾಲು ಶೇಖರಣೆ ಮಾಡಲಾಗುತ್ತಿದೆ.

ಕೋವಿಡ್-19ರ ಮೊದಲನೇ ಅಲೆಯ ಸಂದರ್ಭದಲ್ಲಿ ಹಾಲು ಶೇಖರಣೆ ದಿನವಹಿ 66.00 ಲಕ್ಷ ಲೀಟರ್ ಇದ್ದು, ಜೂನ್-2020 ಕ್ಕೆ 85.00 ಲಕ್ಷ ಲೀಟರ್‌ಗಳಷ್ಟು ಗಣನೀಯವಾಗಿ ಹೆಚ್ಚಾಗುವುದರ ಜೊತೆಗೆ ಸ್ಯಾಚೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಸುಮಾರು ಶೇ.30 ರಿಂದ 35 ರಷ್ಟು ಕುಸಿದು, ಪ್ರತಿ ದಿನ 35 ಲಕ್ಷ ಲೀಟರ್ ಹಾಲನ್ನು ಹಾಲಿನ ಪುಡಿಯಾಗಿ ಪರಿವರ್ತನೆ ಮಾಡುವ ಅನಿವಾರ್ಯ ಸಂದರ್ಭ ಉಂಟಾಯಿತು. ಆ ಸಂದರ್ಭದಲ್ಲಿ ಹಾಲಿನ ಪುಡಿಯ ಉತ್ಪಾದನೆಯ ವೆಚ್ಚ ಪ್ರತಿ ಕೆ.ಜಿ.ಗೆ ರೂ.230 ರಿಂದ 240 ಗಳಾಗಿದ್ದು, ಮಾರುಕಟ್ಟೆಯಲ್ಲಿ ಮಾರಾಟದ ಬೆಲೆ ಪ್ರತಿ ಕೆ.ಜಿ ಗೆ ರೂ.170 ರಿಂದ 180 ಕ್ಕೆ ಕುಸಿದಿತ್ತು.

ಕೋವಿಡ್-19 (2)ರ ಅಲೆಯ ಸಂದರ್ಭದಲ್ಲಿಯೂ ಸಹ ಮಾರುಕಟ್ಟೆಯಲ್ಲಿ ಇದೇ ರೀತಿಯ ಪ್ರತಿಕೂಲ ಪರಿಸ್ಥಿತಿ ಮುಂದುವರೆದಿರುವುದರ ಜೊತೆಗೆ ಸಾಗಾಣಿಕ ವೆಚ್ಚ ಮತ್ತು ಪ್ಯಾಕಿಂಗ್ ವೆಚ್ಚವು ಪ್ರತಿ ಶತ ಶೇ.15 ರಿಂದ 20 ರಷ್ಟು ಹೆಚ್ಚಾಗಿ, ಒಟ್ಟಾರೆ ಒಕ್ಕೂಟಗಳ ಆರ್ಥಿಕ ಪರಿಸ್ಥಿಯ ಮೇಲೆ ತೀವ್ರ ಪರಿಣಾಮ ಉಂಟಾಗಿರುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿ ಇದ್ದಾಗಲೂ ಸಹ ಉತ್ಪಾದಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಯಾವುದೇ ಹಾಲಿನ ಸ್ವೀಕರಣಾ ರಜೆಯನ್ನು ಘೋಷಿಸದೆ ಹಾಲು ಉತ್ಪಾದಕರು ಸರಬರಾಜು ಮಾಡಿದ ಸಂಪೂರ್ಣ ಹಾಲನ್ನು ಸ್ವೀಕರಿಸಿ ಸಂಸ್ಕರಿಸಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ, ಹಾಲು ಶೇಖರಣೆ ದರವನ್ನು ಒಕ್ಕೂಟಗಳು ಅನಿವಾರ್ಯವಾಗಿ ಕಡಿಮೆ ಮಾಡಿರುತ್ತವೆ.

ಕರ್ನಾಟಕ ಹಾಲು ಮಹಾಮಂಡಳಿಯ ವ್ಯಾಪ್ತಿಗೆ ಬರುವ 14 ಜಿಲ್ಲಾ ಹಾಲು ಒಕ್ಕೂಟಗಳು ತಮ್ಮದೇ ಆದ ಚುನಾಯಿತ ಆಡಳಿತ ಮಂಡಳಿ ಹೊಂದಿದ್ದು, ಒಕ್ಕೂಟದ ಆರ್ಥಿಕ ಸ್ಥಿತಿಗತಿ ಮತ್ತು ವಹಿವಾಟಕ್ಕೆ ಅನುಗುಣವಾಗಿ ಸಂಸ್ಥೆ, ಉತ್ಪಾದಕರು ಮತ್ತು ಗ್ರಾಹಕರ ಹಿತಾಶಕ್ತಿಯನ್ನು ಕಾಪಾಡಿಕೊಂಡು ಕಾಲಕಾಲಕ್ಕೆ ಹಾಲಿನ ಖರೀದಿ ಮತ್ತು ಮಾರಾಟದರವನ್ನು ಪರಿಷ್ಕರಣೆ ಮಾಡಿರುತ್ತವೆ. ಮೊದಲಿನಿಂದಲೂ ಸುಗ್ಗಿ ಕಾಲದಲ್ಲಿ ಅಧಿಕ ಹಾಲು ಶೇಖರಣೆ ಆಗುವ ಸಮಯದಲ್ಲಿ ಹಾಲಿನ ದರವನ್ನು ತಗ್ಗಿಸುವುದು ಮತ್ತು ಬೇಸಿಗೆ ಕಾಲದಲ್ಲಿ ದರವನ್ನು ಹೆಚ್ಚಿಸುವುದು ವಾಡಿಕೆ ಕ್ರಮವಾಗಿರುತ್ತದೆ. ಪ್ರಸ್ತುತ, ಸಂಘದಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ಸರಾಸರಿ ರೂ.26.27 ನೀಡಲಾಗುತ್ತಿದೆ.

..3

ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆ ಪರಿಸ್ಥಿತಿ ಸುಧಾರಿಸುತ್ತಿದ್ದು, ಉತ್ಪಾದಕರಿಗೆ ಹಾಲಿನ ದರವನ್ನು ಹೆಚ್ಚಿಸಲು ಸಾಧ್ಯವಾಗಬಹುದಾಗಿದೆ.

ಕರ್ನಾಟಕ ಹಾಲು ಮಹಾ ಮಂಡಳಿಯಿಂದ ಉತ್ಪಾದಕರಿಗೆ ಸರಬರಾಜು ಮಾಡುತ್ತಿರುವ ಸಮತೋಲನ ಪಶು ಆಹಾರದಲ್ಲಿ ದಿನಾಂಕ: 01.01.2018 ರಿಂದ ಪ್ರತಿ ಮೆಟ್ರಿಕ್ ಟನ್ ಗೆ ರೂ.2000/- ರಿಯಾಯಿತಿ ಹಾಗೂ ದಿನಾಂಕ: 06.07.2021 ರಿಂದ ಇಲ್ಲಿಯವರೆವಿಗೂ ಪ್ರತಿ ಮೆಟ್ರಿಕ್ ಟನ್ ಗೆ ರೂ.1500/- ಗಳಂತೆ ರಿಯಾಯಿತಿ ಮುಂದುವರಿಸಲಾಗುತ್ತಿದೆ.

ಕ್ಷೀರಧಾರೆ ಯೋಜನೆಯಡಿ ಹಾಲು ಉತ್ಪಾಕರು ಸರಬರಾಜು ಮಾಡುವ ಗುಣಮಟ್ಟದ ಪ್ರತಿ ಲೀಟರ್ ಹಾಲಿಗೆ ಸರ್ಕಾರವು ರೂ.5/- ನೀಡಿ ಪ್ರೋತ್ಸಾಹ ಧನ ನೀಡಿ ಪ್ರೋತ್ಸಾಹಿಸುತ್ತಿದೆ. 2021-22ನೇ ಸಾಲಿನ ಆಯ-ವ್ಯಯದಲ್ಲಿ ರೂ. 1250.00 ಕೋಟಿ ಅನುದಾನದ ಅವಕಾಶ ಕಲ್ಪಿಸಿದ್ದು, ನವೆಂಬರ್ 2021ರ ಅಂತ್ಯಕ್ಕೆ ರೂ. 892.52 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ. 858.88 ಕೋಟಿಗಳನ್ನು ನೇರವಾಗಿ ಫಲಾನುಭಾವಿಗಳಿಗೆ D.B.T ಹಾಗೂ ಫ್ರೂಟ್ಸ್ ಪೋರ್ಟಲ್ (FRUITS : Farmers Registration & Unified Beneficiary Information System) ಮೂಲಕ ವರ್ಗಾವಣೆ ಮಾಡಿದ್ದು, ಉಳಿಕೆ ಬಾಕಿ ಹಣ ಪಾವತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

**ಸಂ: ಇ- ಪಸಂಮೀ 58 ಕಹಾಮ 2021**

**ಪ್ರಭು ಬಿ. ಚವ್ಹಾಣ್**
**ಪಶುಸಂಗೋಪನೆ ಸಚಿವರು,**